# ಅಭಿನಂದನ ಗ್ರಂಥಕ್ಕೆ ಒಂದು 'ಪೂರಕ' ಗ್ರಂಥ

ಪ್ರೊ. ಕೆ.ಬಿ. ಪ್ರಭುಪ್ರಸಾದ್ ಅವರ ಅಭಿನಂದನ ಗ್ರಂಥ 'ಪ್ರಶಾಂತ' ಈಗಾಗಲೇ ಹೊರಬಂದಿದ್ದು, ಅದಕ್ಕೊಂದು 'ಪೂರಕ' ಗ್ರಂಥ ಹೊರಬಂದಿದೆ; ಇದರ ಶೀರ್ಷಿಕೆಯೇ 'ಪೂರಕ ಪ್ರಶಾಂತ' ಎಂದಾಗಿದೆ. ಮುನ್ನುಡಿಯಲ್ಲಿ ಸಂಪಾದಕರು ಹೇಳುವಂತೆ, ''ಅಭಿನಂದನ ಗ್ರಂಥ 'ಪ್ರಶಾಂತ' ಅಚ್ಚಿನ ಮನೆಗೆ ಹೋದಾಗ ಉಳಿದುಹೋಗಿದ್ದ, ಅನುಪಲಬ್ಧವಾಗಿದ್ದ ಬರಹಗಳನ್ನು ಮತ್ತು ಆಗ ಪರಾಮರ್ಶೆಗೆ ಒಳಪಡದೆ ಉಳಿದ ಅವರ ಕೆಲವು ಕೃತಿ, ಪ್ರಬಂಧಗಳ ಬಗ್ಗೆ ಬರೆಯಲಾದ ಲೇಖನಗಳನ್ನು 'ಪ್ರಶಾಂತ'ಕ್ಕೆ ಪೂರಕವಾಗಿ ಇಲ್ಲಿ ಸಂಕಲನ ಮಾಡಲಾಗಿದೆ. ಈ ಅರ್ಥದಲ್ಲಿ ಇದು 'ಪೂರಕ ಪ್ರಶಾಂತ.' '' ಈ ನುಡಿಗಳು ಪುಸ್ತಕದ ಹಿನ್ನೆಲೆ ಮತ್ತು ಸ್ವರೂಪವನ್ನು ವಿವರಿಸುತ್ತದೆ. ೮೦ ಪುಟಗಳ ಚಿಕ್ಕ ಪುಸ್ತಕ ಇದಾಗಿದ್ದರೂ ಇಲ್ಲಿ ಅಡಕವಾಗಿರುವ ಲೇಖನಗಳು ವೈವಿಧ್ಯಮಯವಾಗಿವೆ; ದೊಡ್ಡ ವ್ಯಕ್ತಿತ್ವವೊಂದರ ಜೀವನ, ಸಾಧನೆ, ಕೊಡುಗೆಗಳನ್ನು ಇನ್ನಷ್ಟು ವ್ಯಾಪಕವಾಗಿ ಪ್ರಕಾಶಪಡಿಸುವ ಉದ್ದೇಶವನ್ನು ಹೊಂದಿದೆ.




**ಕೃತಿ:** ಪೂರಕ ಪ್ರಶಾಂತ
ಪ್ರೊ.ಕೆ.ಬಿ. ಪ್ರಭುಪ್ರಸಾದ್
ಅಭಿನಂದನ ಗ್ರಂಥ
**ಪ್ರಕಾಶನ :** ಸಂವಹನ, ೧೨/೧೩, ಈವನಿಂಗ್ ಬಜಾರ್, ಶಿವರಾಂಪೇಟೆ, ಮೈಸೂರು-೧
**ಪುಟ:** 80

ಈ ಕೃತಿಯಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗ 'ವ್ಯಕ್ತಿತ್ವ ಚಿತ್ರಣ.' ಇಲ್ಲಿ ಮೂರು ಬರಹಗಳಿದ್ದು, ನಾ. ರಾಮಾನುಜ ಅವರು ಬರೆದ 'ಪ್ರೊ.ಕೆ.ಬಿ.ಪ್ರಭುಪ್ರಸಾದರೊಂದಿಗೆ ಆ ಒಂದು ಭಾನುವಾರದ ಬೆಳಿಗ್ಗೆ' ಎಂಬ ಲೇಖನ, ಎನ್ನಾರ್ ರಾವ್ ಅವರ 'ನಮ್ಮೆಲ್ಲರ ವಂದನೆ-ಅಭಿನಂದನೆ ಶ್ರೀ ಕೆ.ಬಿ.ಪ್ರಭುಪ್ರಸಾದರಿಗೆ' ಎಂಬ ಗದ್ಯರೂಪದ ಕವಿತೆ, ಹಾಗೂ ಡಾ. ಜೀವಿ ಕುಲಕರ್ಣಿ ಅವರ 'ನಾನು ತಿಳಿದಂತೆ ಪ್ರಭುಪ್ರಸಾದ್' ಎಂಬ ಲೇಖನಗಳಿವೆ.

ಗ್ರಂಥದ ಎರಡನೆಯ ಭಾಗ 'ಕೃತಿ ವಿಮರ್ಶೆ'. ಇಲ್ಲಿ ಪ್ರಭುಪ್ರಸಾದ್ ಅವರ ಅನೇಕ ಲೇಖನಗಳ ಪರಾಮರ್ಶೆಯನ್ನು ಹೊಂದಿರುವ ಹದಿನೆಂಟು ಲೇಖನಗಳಿವೆ. ಇದರಲ್ಲಿ ನಾಡಿನ ಪ್ರಸಿದ್ಧ ಲೇಖಕರಾದ ಡಾ.ರಾಮಕೃಷ್ಣ ಜೋಷಿ, ಎಂ. ಸತ್ಯವತಿ, ಎಸ್. ಎಸ್.ರಮೇಶ್, ಪ್ರೊ. ಓ.ಎಲ್.ನಾಗಭೂಷಣಸ್ವಾಮಿ, ಡಾ.ಎಂ.ಜಿ.ಬಸವರಾಜ್, ವಿ.ಮಾ.ಜಗದೀಶ್, ಡಾ.ಜೆ. ನರೇಂದ್ರ, ಅಲಕಾ ಕಟ್ಟೇಮನೆ, ಡಾ.ಎಚ್.ಟಿ. ಶೈಲಜ, ಡಾ. ಎನ್.ಎಸ್.ತಾರಾನಾಥ್ ಮುಂತಾದವರ ಲೇಖನಗಳು ಸೇರಿವೆ.

ಈ ಲೇಖನಗಳನ್ನು ಗಮನಿಸುವಾಗ ಒಂದು ಅಂಶ ಸ್ಪಷ್ಟವಾಗುತ್ತದೆ: ಪ್ರಭುಪ್ರಸಾದ್ ಅವರ ವ್ಯಾಸಂಗ ಎಷ್ಟು ವಿಸ್ತಾರವೋ, ಅಷ್ಟೇ ವಿಸ್ತಾರ ಅವರ ಸಾಹಿತ್ಯಸೇವೆ ಕೂಡ. ಇಂಗ್ಲಿಷ್ ಸಾಹಿತ್ಯ, ಕನ್ನಡ ಸಾಹಿತ್ಯ, ವಿಚಾರ ಸಾಹಿತ್ಯ, ಅನುವಾದ, ಶಿಕ್ಷಣ ವಿಷಯಕವಾದ ಕೃತಿಗಳು, ವಚನಸಾಹಿತ್ಯ — ಹೀಗೆ ಬಹಳ ವೈವಿಧ್ಯಮಯವಾದ ಕ್ಷೇತ್ರಗಳಲ್ಲಿ ಕೈಯಾಡಿಸಿದ್ದಾರೆ ಅವರು. ಅವರ ಕೃತಿಗಳ ಅವಲೋಕನದಿಂದ ಅವರ ಮೂಲ ಲೇಖನಗಳನ್ನು ಓದಬೇಕೆಂಬ ತವಕ ಓದುಗರಲ್ಲಿ ಮೂಡಬಹುದು. ಪ್ರಭುಪ್ರಸಾದ್ ಅವರ ಲಲಿತಪ್ರಬಂಧಗಳ ಬಗ್ಗೆ ಬರೆಯುತ್ತಾ ಶ್ರೀಮತಿ ಅಲಕಾ ಕಟ್ಟೇಮನೆಯವರು ಹೀಗೆ ಹೇಳುತ್ತಾರೆ: ''ಇವುಗಳನ್ನು ಓದುವಾಗ, ಎಂಥಾ ಸಣ್ಣ ವಿಷಯಗಳನ್ನು ಕಂಡು - ಕೇಳಿ ಸಂಭ್ರಮಿಸಿ, ಬದುಕನ್ನು ಚಂದವಾಗಿಸಿಕೊಳ್ಳಬಹುದಲ್ಲಾ ಎಂಬ ಸೋಜಿಗ ಮೂಡುವುದು ಹೌದು. ಸಂತೋಷವನ್ನು ಎಲ್ಲೆಲ್ಲೋ ಹುಡುಕಿ ಅಲೆಯುವ ಬದಲು, ಮಾವಿನ ಋತುವಿನಲ್ಲಿ ಕಿಸೆಯಲ್ಲೊಂದು ಚಾಕು, ಉಪ್ಪು-ಖಾರ - ಇದಿಷ್ಟಿದ್ದರೂ ಬ್ರಹ್ಮಾನಂದ ದಕ್ಕೀತು ಎಂಬ ಸರಳ ತತ್ತ್ವ ಅನಾವರಣಗೊಳ್ಳುವುದು 'ಋತುರಾಜ ತಂದ ಮಾವಿನಹಣ್ಣು' ಎಂಬ ಅವರ ಪ್ರಬಂಧದಲ್ಲಿ.''

ಹಿಂದೊಮ್ಮೆ ಅಭಿನಂದನ ಗ್ರಂಥಗಳೆಂದರೆ, ಗ್ರಂಥಾಲಯಗಳಲ್ಲಿ ಕುಳಿತು ಸುದೀರ್ಘವಾಗಿ ತಿರುವಿಹಾಕಿ, ಅಲ್ಲಿ ಸಂಗ್ರಹಗೊಂಡಿರುವ ವಿವಿಧ ಲೇಖನಗಳಲ್ಲಿ ಕೆಲವನ್ನು ಆಯ್ದು ಓದುವ ಪರಿಪಾಠವಿತ್ತು. ಇಂದು ಓದುವ ಹವ್ಯಾಸವೇ ಕಡಿಮೆಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಒಂದು ಬೃಹತ್ ಅಭಿನಂದನ ಗ್ರಂಥವಲ್ಲದೆ, ಅದಕ್ಕೆ 'ಪೂರಕ' ಗ್ರಂಥವನ್ನೂ ಪ್ರಕಟಿಸುವ ಹುಮ್ಮಸ್ಸು ಯಾಕಾದರೂ ಬಂತು? ಡಾ. ಪ್ರಭುಪ್ರಸಾದ್ ಅವರ ಭವ್ಯ ವ್ಯಕ್ತಿತ್ವವೇ ಇದಕ್ಕೆ ಕಾರಣವೆನ್ನಬೇಕು. ಅಪಾರ ಶಿಷ್ಯವರ್ಗ, ಸ್ನೇಹಿತರ, ಹಿತೈಷಿಗಳ ಬಳಗ, ಹಿರಿಯ ವಿದ್ವಾಂಸರುಗಳ ಸಹಕಾರ - ಇವೆಲ್ಲವೂ ಇಲ್ಲಿ ಮೇಳೈಸಿ, ಹಿರಿಯ ವಿದ್ವಾಂಸರಿಗೆ ಯೋಗ್ಯ ಕೃತಿಯೊಂದನ್ನು ಅಭಿನಂದನವಾಗಿ ಸಮರ್ಪಿಸಲಾಗಿದೆ. ಈ 'ಪ್ರಶಾಂತ ಪೂರಕ'ವು ಮೂಲಕೃತಿಯ ಶೋಭೆಯನ್ನು ಮತ್ತಷ್ಟು ಹೆಚ್ಚಿಸಲಿ ಎಂದು ಹಾರೈಸುತ್ತೇವೆ. ✽